**ದಿನಾಂಕ: 20.02.2021 ರಂದು 10-30 ಕ್ಕೆ ಶ್ರೀ ಹೆಚ್. ನಾಗರಾಜಪ್ಪ, ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್-177 (ಜೆ.ಪಿ.ನಗರ) ನಡೆದ ಸಭೆಯ ನಡಾವಳಿಗಳು:**

## : ಚರ್ಚೆಯಾದ ವಿಷಯಗಳು :

1. ವಾರ್ಡ್-177ರಲ್ಲಿನ ಸಾರ್ವಜನಿಕರ ಎಲ್ಲಾ ರೀತಿಯ ಕುಂದುಕೊರತೆಗಳ ಬಗ್ಗೆ ಅಭಿವೃದ್ಧಿ ಕಾಮಗಾರಿಗಳು ಹಾಗೂ ಘನತ್ಯಾಜ್ಯ ನಿರ್ವಹಣೆ ಮತ್ತು ಕೊವಿಡ್-19ರ ಬಗ್ಗೆ ಚರ್ಚಿಸುವ ಕುರಿತು.
2. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸುವಂತಹ ಇತರೆ ವಿಷಯಗಳು.

## : ಸಭೆಗೆ ಹಾಜರಾಗಿದ್ದವರ ವಿವರಗಳು :

| | |
|---|---|
| ಅಧ್ಯಕ್ಷರು | ನೋಡಲ್ ಅಧಿಕಾರಿ |
| ಸದಸ್ಯ ಕಾರ್ಯದರ್ಶಿ | ವಾರ್ಡ್ 177ರ ಸಹಾಯಕ ಅಭಿಯಂತರರು |
| ಸದಸ್ಯರುಗಳು | ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು |
| ಸದಸ್ಯರುಗಳು | ಬಿಡಬ್ಲ್ಯೂಎಸ್ಎಸ್‌ಬಿ ಅಭಿಯಂತರರು |
| ಸದಸ್ಯರುಗಳು | ಜೆ.ಪಿ.ನಗರ ಸಹಾಯಕ ಕಂದಾಯ ಅಧಿಕಾರಿಗಳು |
| ಸದಸ್ಯರುಗಳು | ತೋಟಗಾರಿಕಾ ಅಧೀಕ್ಷಕರು (ದಕ್ಷಿಣ) |
| ಸದಸ್ಯರುಗಳು | ಬೆಸ್ಕಾಂ ಅಧಿಕಾರಿಗಳು |
| ಸದಸ್ಯರುಗಳು | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ರೋಡ್ ಇನ್‌ಫ್ರಾ) |
| ಸದಸ್ಯರುಗಳು | ಕಂದಾಯ ಪರಿವೀಕ್ಷಕರು, ವಾರ್ಡ್ 177 |
| ಸದಸ್ಯರುಗಳು | ಅರಣ್ಯ ಇಲಾಖೆ ಅಧಿಕಾರಿಗಳು |
| ಸದಸ್ಯರುಗಳು | ಮಾರ್ಷಲ್ |
| ಸಾರ್ವಜನಿಕರು | ಶ್ವೇತಾ .ಎಸ್ WOW GROUP (WOW) |
| ಸಾರ್ವಜನಿಕರು | ಶಕೀಲಾ ಭಾನು RWA- WOW GROUP |
| ಸಾರ್ವಜನಿಕರು | ದೇವದಾಸ್ ಶೆಣೈ |

## :ನಡಾವಳಿಯ ವರದಿ:

➢ ಅಧ್ಯಕ್ಷರು ಮಾತನಾಡುತ್ತಾ ಹಿಂದಿನ ಸಭೆಯಲ್ಲಿ ಚರ್ಚೆಯಾದ ವಿಷಯಗಳ ಬಗ್ಗೆ ಅಧಿಕಾರಿಗಳು ಕೈಗೊಂಡ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

**ಪು.ತಿ.ನೋ**

<u>**ಸದರಿ ಸಭೆಯಲ್ಲಿ ಕಸ ವಿಲೇವಾರಿ ಸಮಸ್ಯೆ ಹಾಗೂ ಇತರೇ ದೂರುಗಳ ಬಗ್ಗೆ ಕುರಿತು ಈ ಕೆಳಕಂಡಂತೆ ಪ್ರಸ್ತಾಪಿಸಲಾಯಿತು.**</u>

- 24ನೇ ಮುಖ್ಯರಸ್ತೆಯಲ್ಲಿ ರಸ್ತೆ ಮತ್ತು ಪಾದಚಾರಿ ಮಾರ್ಗವನ್ನು ಅಭಿವೃದ್ಧಿಪಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುವಂತೆ ತಿಳಿಸಲಾಯಿತು.

- ವಾರ್ಡ್ ಸಂಖ್ಯೆ 177ರಲ್ಲಿ Dry Waste Collection Center ಅನ್ನು ನಿರ್ಮಾಣಕ್ಕೆ ಅನುದಾನವನ್ನು ಕಾಯ್ದಿರಿಸಲು ಕೋರಲಾಯಿತು.

- ವಾರ್ಡ್ ಸಂಖ್ಯೆ 177ರ ಮಾರೇನಹಳ್ಳಿಯಲ್ಲಿ ಉಳಿದಿರುವ ರಸ್ತೆ ಮತ್ತು ಚರಂಡಿ ಮೋರಿಯನ್ನು ಅಭಿವೃದ್ಧಿಪಡಿಸುವಂತೆ ಸಾರ್ವಜನಿಕರು ಕೋರಿದರು.

- 9ನೇ ಅಡ್ಡರಸ್ತೆಯಲ್ಲಿನ ಪಾದಚಾರಿ ರಸ್ತೆ ಮತ್ತು ಚರಂಡಿಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲು ಕೋರಿದರು.

- ಸಾರ್ವಜನಿಕರ ಶೌಚಾಲಯಗಳ ನಿರ್ಮಾಣಕ್ಕೆ ಅನುದಾನ ನಿಗದಿಪಡಿಸಲು ಕೋರಿದರು.

- ವಾರ್ಡ್‌ನ ವಿವಿಧ ಭಾಗಗಳಲ್ಲಿ ಸಿಸಿಟಿವಿ ಅಳವಡಿಸಲು ಕೋರಲಾಯಿತು.

- 7ನೇ ಅಡ್ಡರಸ್ತೆ, ಜೆ.ಪಿ.ನಗರ 2ನೇ ಹಂತದಲ್ಲಿ ಪಾರ್ಕಿಂಗ್ ಸಮಸ್ಯೆ ಬಗೆಹರಿಸಲು ಕೋರಲಾಯಿತು.

- ಕೊನೆಯದಾಗಿ ಮಾನ್ಯ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಸಾರ್ವಜನಿಕರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆ ಪ್ರತಿ ತಿಂಗಳು ಮೊದಲ ಶನಿವಾರ ಹಾಗೂ ಮೂರನೇ ಶನಿವಾರ ಬೆಳಿಗ್ಗೆ 10.30 ಘಂಟೆಗೆ ಇದೇ ರೀತಿಯಾಗಿ ಮಾಸಿಕ 2 ಬಾರಿ ವಾರ್ಡ್ ಸಮಿತಿ ಸಭೆ ನಡೆಯುವುದಾಗಿ ತಿಳಿಸಿ ಮುಂದಿನ ಸಭೆಗಳಿಗೆ ಈ ವಾರ್ಡಿನ ವ್ಯಾಪ್ತಿಗೆ ಬರುವ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸದರಿ ಸಭೆಗೆ ಮಾಹಿತಿಗಳೊಂದಿಗೆ ಸಕಾಲದಲ್ಲಿ ಹಾಜರಾಗುವಂತೆ ಹಾಗೂ ಈ ಸಭೆಯಲ್ಲಿ ತಿಳಿಸಿರುವ ಸಮಸ್ಯೆಗಳನ್ನು ಬಗೆಹರಿಸಲು ಕೋರಿ ಪತ್ರ ಬರೆಯಲು ಸದಸ್ಯ ಕಾರ್ಯದರ್ಶಿ ರವರಿಗೆ ಸೂಚಿಸಿದರು.

- ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದ ಶ್ರೀ ರಾಮು .ಎಸ್ ರವರು ಸಭೆಗೆ ಹಾಜರಾದ ಎಲ್ಲಾ ಸದಸ್ಯರಿಗೂ ಹಾಗೂ ಅಧಿಕಾರಿಗಳು/ನೌಕರರಿಗೂ ವಂದನಾರ್ಪಣೆ ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಸದಸ್ಯ ಕಾರ್ಯದರ್ಶಿ**
**ಹಾಗೂ ಸಹಾಯಕ ಅಭಿಯಂತರರು**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಧ್ಯಕ್ಷರು**
**ವಾರ್ಡ್ ಸಮಿತಿ, ವಾರ್ಡ್ ನಂ. 177**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**